ಅಂದರೆ ಭಕ್ತಿ. ಬೋಜಗ ಅಂದರೆ ಹಣಕೇಂದ್ರಿತ ಲೌಕಿಕ ಬದುಕು. ಭಕ್ತಿಯೆಂಬ ಕೂಸನ್ನು ಪಡೆಯಬೇಕೆಂದರೆ ಈ ವ್ಯವಸ್ಥೆಯೊಳಗಡೆ ಸಾಧ್ಯವಿಲ್ಲ. ಹೊರಬರಬೇಕು, ಶರಣಾಗಬೇಕು. ಅಲ್ಲಿ ದಾಸೋಹ ಪರಿಕಲ್ಪನೆಯಡಿ ಬೆಸೆದ ವ್ಯವಸ್ಥೆಯೊಂದಿದೆ. ಸಂಘಟಕ ಬಸವಣ್ಣನ ಸಾಮಾನ್ಯರನ್ನು ತಲಪುವ ಪ್ರಯತ್ನದ ಭಾಗವಾಗಿ ಬರುವ ಇಂತಹ ಅನೇಕ ವಚನಗಳ ಮೂಲ ಆಶಯ ಬೇರೆಯೇ ಇದ್ದರೂ, ವಾಸ್ತವದ ಬದುಕಲ್ಲಿ ದುರ್ಬರ ಪರಿಸ್ಥಿತಿಯಲ್ಲಿರುವ ಕೂಸುಳ್ಳ ಸೂಳೆಯು ಇಲ್ಲಿ ಕೇವಲ ಉದಾಹರಣೆ ಅಷ್ಟೇ ಆಗುತ್ತಾಳೆ. ಹೀಗಾಗಿ, ಇಂತಹ ವಚನಗಳು ಭಕ್ತಿಯ ಪ್ರತಿಪಾದನೆಯ ಭರದಲ್ಲಿ ಹೆಣ್ಣಿನ ಬಗೆಗಿನ ಅಭಿವ್ಯಕ್ತಿಯಲ್ಲಿನ ಅಸೂಕ್ಷ್ಮಗಳನ್ನು ಬಹಿರಂಗಪಡಿಸುತ್ತವೆ.

## ಶರಣೆಯರು ಮೆಚ್ಚಿಕೊಳ್ಳುವ ಬಸವಣ್ಣ

ಆದರೆ ಬಸವಣ್ಣ ಇಷ್ಟೇ ಅಲ್ಲ. ವಚನಗಳ ಮರುಭೇಟಿಯ ನಂತರ ಒಂದು ವಿಷಯ ಸ್ಪಷ್ಟವಾಗುತ್ತದೆ. ಅದೆಂದರೆ, ಬಸವಣ್ಣನೊಂದಿಗೆ ಇಂದಿಗೂ ಹೆಣ್ಣುಮಕ್ಕಳು ಸಂವಾದ ಮಾಡುವುದು ಸಾಧ್ಯವಿದೆ. ಆದರೆ ಈ ಸಂವಾದದ ಸಾಧ್ಯತೆಯನ್ನು ತೆರೆದಿಟ್ಟಿರುವುದು ಬಸವಣ್ಣನಿಗಿಂತ ಹೆಚ್ಚಾಗಿ ಶರಣೆಯರು. ಬಸವಣ್ಣನ ವಚನಗಳಲ್ಲಿ ಕಾಣಿಸುವ ಹೆಣ್ಣಿಗೂ ಅನುಭವ ಮಂಟಪದಲ್ಲಿ ಆತ ಒಡನಾಡಿದ ಹೆಣ್ಣುಮಕ್ಕಳು ಆತನೆಡೆಗೆ ತೋರುವ ಕಕ್ಕುಲಾತಿಗೂ ಸಂಬಂಧವೇ ಇದ್ದಂತೆ ಕಾಣುವುದಿಲ್ಲ. ಅವರು ಆತನೆಡೆಗೆ ಆ ಮಟ್ಟಗಿನ ನಂಬಿಕೆ ತೋರಿದ್ದಾರೆಂದ ಮೇಲೆ ಆತನ ವಚನಗಳಾಚೆಗಿನ ಕಿಂಡಿಯೇನಾದರೂ ಇದೆಯೇ ಎಂದು ಶೋಧಿಸಬೇಕಾಗುತ್ತದೆ. ಆ ಕಿಂಡಿ ತೆರೆದುಕೊಳ್ಳುವುದು ಶರಣೆಯರ ವಚನಗಳಲ್ಲಿ. ಬಸವಣ್ಣನ ಹೆಸರನ್ನು ಉಲ್ಲೇಖಿಸುವ ಮತ್ತು ಮೆಚ್ಚಿಕೊಳ್ಳುವ ಶರಣೆಯರ ಐವತ್ತಕ್ಕೂ ಹೆಚ್ಚು ವಚನಗಳು ಸಿಗುತ್ತವೆ. (ಅಕ್ಕಮಹಾದೇವಿಯ ಇಪ್ಪತ್ತೆಂಟು ವಚನಗಳಿವೆ.) ಬಸವಣ್ಣ ತನ್ನ ವಚನಗಳಲ್ಲಿ ಹೆಣ್ಣನ್ನು ಅಷ್ಟು ರೂಕ್ಷವಾಗಿ ನಿಂದಿಸಿದ್ದರೂ ಇವರು ಅದನ್ನು ವೈಯಕ್ತಿಕವಾಗಿ ತೆಗೆದುಕೊಂಡಂತೆ ಕಾಣುವುದಿಲ್ಲ – ಅಕ್ಕಮಹಾದೇವಿಯನ್ನೂ ಒಳಗೊಂಡು. ಬಹುಶಃ ಪಿತೃಪ್ರಧಾನತೆಯು ಹೆಣ್ಣಿನ ಮೇಲೆ ಮಾತ್ರ ಹೇರಿರುವ ನೈತಿಕತೆಯನ್ನು ಇವರೂ ಒಪ್ಪಿಕೊಂಡಿರಬಹುದು. ಹಾಗಂತ ಇನ್ನಿತರ ವಿಷಯದಲ್ಲಿ ಅವರು ಬಸವಣ್ಣನನ್ನೂ ಸೇರಿಸಿ ಪ್ರಶ್ನಿಸಿದವರೇ ಆಗಿದ್ದರು. ಈ ಕಾರಣಕ್ಕೇ ನನಗೆ ಆತನ ವಚನಗಳಲ್ಲಿ ಕಾಣುವ ಹೆಣ್ಣು ಈ ಲೋಕದ ಅಲಿಖಿತ ಸಂವಿಧಾನವು ಚಿತ್ರಿಸಿದ, ಬಿಂಬಿಸಿದ, ನಂಬಿಸಿದ ಹೆಣ್ಣಿನ ದಾಖಲಾತಿಯಾಗಿ ಕಾಣಿಸುತ್ತಿರುವುದು. ಹೆಣ್ಣಿನೆಡೆಗಿನ ಈ ಬಿಂಬ ಅಕ್ಷರಶಃ ಹೆಣ್ಣು ಮತ್ತು ಗಂಡು ಮನಸ್ಸುಗಳನ್ನು ಆಳುತ್ತಿರುವಾಗ, ನಿಯಂತ್ರಣದ ಸಾಧನಗಳಾಗಿ ಕೆಲಸ ಮಾಡುತ್ತಿರುವಾಗ ಅದರಿಂದ ಪಾರಾಗುವ ದಾರಿಯೇ ಕಾಣದಿರುವಾಗ ಭಕ್ತಿ ಚಳವಳಿಯು ಅದಕ್ಕೊಂದು ಹಾದಿ ತೆರೆದಿರುವ ಸುಳುವು ಇದೆ.

ಭಕ್ತಿ ಸಿದ್ಧಾಂತದ ಪ್ರಕಾರ ಭಕ್ತರಾದವರೊಳಗೆ ಜಾತಿ–ಲಿಂಗ ಭೇದಗಳು ಇರುವುದಿಲ್ಲ. ಇದು ಅಲ್ಲೊಂದು ಸಂವಾದ ಸಾಧ್ಯತೆಯನ್ನು ರೂಪಿಸಿಕೊಡುತ್ತದೆ. ಅಲ್ಲಿಯ ತನಕ ಕುಟುಂಬದೊಳಗಡೆಯೂ ತಮ್ಮ ಅಭಿಪ್ರಾಯವನ್ನು ಹೇಳುವ ಅವಕಾಶವೇ ಇಲ್ಲದ ಹೆಣ್ಣುಮಕ್ಕಳು ಇಲ್ಲಿ ತಾವೂ ಮಾತನಾಡುವ ಸಾಧ್ಯತೆಯನ್ನು ಸಾಕಾರಗೊಳಿಸಲು ಆಗುವುದು ಅವರೊಳಗೊಂದು ಆತ್ಮವಿಶ್ವಾಸವನ್ನು ಹುಟ್ಟಿಸಿದೆ. ಭಕ್ತಿಯೆಂಬುದು ಪ್ರಾಪಂಚಿಕ, ವ್ಯಾವಹಾರಿಕ ಜೀವನದಾಚೆಯ ಬದುಕನ್ನು ಪ್ರತಿಪಾದಿಸುವುದರಿಂದಾಗಿ, ಇಲ್ಲಿನ ಸನ್ನಿವೇಶದಲ್ಲಿ ಗಂಡಸರು ಹೆಚ್ಚು ಲಿಬರಲ್ ಆಗಿರುವಂತೆ ತೋರುತ್ತದೆ. ಮಾತ್ರವಲ್ಲ, ಇಲ್ಲಿ ಹೆಂಗಸರು ಸಾಂಸಾರಿಕ ಬದುಕಿನ ಹಲವು ಅಲಿಖಿತ ನಿಯಂತ್ರಣಗಳನ್ನೂ, ನಿಯಮಗಳನ್ನೂ ದಾಟುವುದಕ್ಕೆ ಇದು ಅನುವು ಮಾಡಿಕೊಟ್ಟಂತಿದೆ. ಈ ಹೊಸ ಸನ್ನಿವೇಶದಲ್ಲಿ ಅಕ್ಕನಂತೆ ಒಂಟಿಯಾಗಿ ತೆರಳಿ ಧ್ಯಾನಸ್ಥಳಾಗುವುದೂ ಅನುಚಿತವಲ್ಲ ಎಂಬ ಮಾದರಿ ಅವರೆದುರಿಗಿದೆ. ಇದು ದೊಡ್ಡ ಬಿಡುಗಡೆಯ ಭಾವವನ್ನೂ, ಅಭಿವ್ಯಕ್ತಿಯ ದಿಟ್ಟತನವನ್ನೂ ಅವರಿಗೆ ನೀಡಿದೆ. ಹೀಗಾಗಿ ಅವರು ತಮ್ಮ ಅನುಭವಕ್ಕೆ ಬಂದ ಯಾವ ವಿಚಾರವನ್ನೂ ಮುಚ್ಚಿಡುವುದಿಲ್ಲ. ಅನುಭವ ಮಂಟಪದ ಗೋಡೆಗಳಿಂದಾಚೆಗಿನ ಗಂಡಿನ ಯಾವ ವರ್ತನೆಗಳನ್ನೂ ಅವರು ಪರೀಕ್ಷಿಸದೆ ಬಿಡುವುದಿಲ್ಲ. ಈ ಸ್ವಾತಂತ್ರ್ಯವನ್ನು ಸರಿಯಾದ ರೀತಿಯಲ್ಲೇ ನಿರ್ವಹಿಸುವ ಶರಣೆಯರು, ಶರಣ ಚಳವಳಿಯು ದಾರಿ ತಪ್ಪದಂತೆ ನಿಗಾ ವಹಿಸಲು ಹೆಚ್ಚು ಆಸಕ್ತಿ ತೋರುತ್ತಾರೆ. ಹೀಗೆ